

# ರಾಜಶೇಖರರ 'ಹಿಂಸೆ'ಯ ಕಾಣ್ಕೆ



**ಕೆ. ಫಣಿರಾಜ್**

ಒಬ್ಬ ನುರಿತ ಕರಕುಶಲಕರ್ಮಿಯಿಂದ ಕಸುಬುದಾರಿಕೆ ಕಲಿಯಲು ಅವರ ಸಹಾಯಕರಾಗುವುದು (ಅಪ್ರೆಂಟಿಸ್) ಆಗಬೇಕು. ಹಾಗೇ ನುರಿತ ಬೌದ್ಧಿಕರಿಂದ ವೈಚಾರಿಕ ಒಳನೋಟಗಳನ್ನು ಪಡೆಯಲು ಅವರ ಸಹಾಯಕರಾಗಿ ಕೆಲಸ ಮಾಡುವುದೂ, ಬಹಳ ಮೌಲಿಕವಾದ ಕಲಿಕೆಯ ವಿಧಾನ ಎಂದು ನಾನಾದರೂ ಭಾವಿಸಿರುವೆ. ಇಂಥ ಒಂದು ಅವಕಾಶ ನನಗೆ ದೊರಕಿದ್ದು, ಜಿ. ರಾಜಶೇಖರರ ಜೊತೆ ಕರ್ನಾಟಕದ ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿದ್ದ ಹಿಂಸೆಗಳ ಸ್ಥಳಕಲಿಕೆಯ ಹೊತ್ತಿನಲ್ಲಿ.

ಇಪ್ಪತ್ತು ವರ್ಷಗಳ ಕಾಲ, ಹಿಂಸೆಯ ಘಟನೆ ತಿಳಿದ ಕೂಡಲೆ ಹಿಂಸೆ ನಡೆದ ಪ್ರದೇಶಕ್ಕೆ ಹೋಗಿ, ಹಿಂಸೆಗೀಡಾದವರನ್ನು ಕಂಡು–ಮಾತನಾಡಿಸಿ ವರದಿ ಮಾಡುವ ಕೆಲಸದಲ್ಲಿ ನಾನು ರಾಜಶೇಖರರ ಅನುವರ್ತಿಯಾಗಿದ್ದವನು. ಹಾಗೇ ಸ್ಥಳಕಲಿಕೆಗೆ ಹೋದಾಗ, ರಾಜಶೇಖರ ಮೊದಲಾಗಿ ಹಿಂಸೆಗೀಡಾದವರು ಮತ್ತು ಆ ಕುಟುಂಬದ ಸದಸ್ಯರ ವೈಯಕ್ತಿಕ ಹಾಗೂ ಸಾಂಸಾರಿಕ ಸವಿವರಗಳನ್ನು ಕೇಳುವರು; ನಂತರ ಹಿಂಸೆಯ ವಿದ್ಯಮಾನದ ಕುರಿತು ವಿವರ ಕೇಳುವರು. ಸ್ಥಳದಿಂದ ವಾಪಸು ಬರುವಾಗ, ಹಿಂಸೆಗೀಡಾದವರ ಮನೆಯ